206 (426) : ಶ್ರೀ ಆಂಜನೇಯ ಹೆಚ್. (ಭರಮಸಾಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲೆಗಳಲ್ಲಿ ಗಣಿಗಾರಿಕೆ, ಅದರಲ್ಲೂ ಮುಖ್ಯವಾಗಿ ಕಬ್ಬಿಣದ ಅದಿರು, ಗಣಿಗಾರಿಕೆಗೆ ಎಷ್ಟು ಪ್ರದೇಶವನ್ನು ಗುತ್ತಿಗೆ ನೀಡಲಾಗಿದೆ? ಗುತ್ತಿಗೆದಾರರ ಹೆಸರು, ವಿಸ್ತೀರ್ಣ, ಅವದಿ, ವಿಳಾಸ ಮುಂತಾದ ವಿವರಗಳನ್ನು ನೀಡುವುದು.

ಆ) ಆ ಪೈಕಿ ಕರ್ನಾಟಕದವರು ಯಾರು ಯಾರು?

ಇ) ಇದರಿಂದ ಪರಿಸರ ನಾಶವಾಗುವುದಿಲ್ಲವೆ?

ಈ) ಇದನ್ನು ತಡೆಗಟ್ಟಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಹನ್ನೊಂದು ಪ್ರದೇಶಗಳಲ್ಲಿ ಕಬ್ಬಿಣದ ಅದಿರು ಗಣಿ ಗುತ್ತಿಗೆ ನೀಡಲಾಗಿದೆ. ವಿವರಗಳನ್ನು ಅನುಬಂಧ –1 ರಲ್ಲಿ ನೀಡಲಾಗಿದೆ.

ಆ) ಎಲ್ಲಾ ಗಣಿ ಗುತ್ತಿಗೆದಾರರೂ ಕರ್ನಾಟಕದಲ್ಲಿನ ವಿಳಾಸವನ್ನೇ ನೀಡಿರುತ್ತಾರೆ.

ಇ) ಗಣಿ ಗುತ್ತಿಗೆ ಮಂಜೂರು ಮಾಡುವ ಮುನ್ನ ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ನಿರಾಕ್ಷೇಪಣ ಪತ್ರ ಹಾಗೂ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯಿಂದ ವಿಮೋಚನಾ ಪತ್ರಗಳನ್ನು ಪಡೆದು ಗಣಿ ಗುತ್ತಿಗೆ ಮಂಜೂರು ಮಾಡುವುದರಿಂದ ಪರಿಸರ ನಾಶವಾಗುವ ಸಂದರ್ಭವು ಬಹಳ ಕಡಿಮೆ ಇರುತ್ತದೆ.

ಈ) ಪರಿಸರ ನಾಶವನ್ನು ತಡೆಗಟ್ಟಲು ಗಣಿ ಗುತ್ತಿಗೆ ಮಂಜೂರು ಮಾಡುವಾಗ MCR 1960ರ ನಿಯಮ 27ರನ್ವಯ ಷಷರತ್ತುಗಳನ್ನು ವಿಧಿಸಿ ಅವುಗಳಲ್ಲಿ ಗಣಿಗಾರಿಕೆ ನಡೆಸುವ ಪ್ರದೇಶದಲ್ಲಿ ಪರಿಸರದ ದೃಷ್ಟಿಯಿಂದ ಗಿಡ ಮರಗಳನ್ನು ಬೆಳೆಸುವುದು ಹಾಗೂ ಗಣಿ ಗುತ್ತಿಗೆ ಕಾಲಾವಧಿ, ಮುಗಿದ ನಂತರ ಅಂತಹ ಗಿಡಮರಗಳನ್ನು ಅರಣ್ಯ ಇಲಾಖೆ ಸುವರ್ದಿಗೆ ಒಪ್ಪಿಸುವುದು, ಮುಂತಾದ ಷರತ್ತುಗಳನ್ನು ವಿಧಿಸಲಾಗುತ್ತದೆ.

ಅನುಬಂಧ–1

ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲೆಗಳಲ್ಲಿ ಕಬ್ಬಿಣದ ಅದಿರು ಗಣಿಗಾರಿಕೆಗೆ ಗುತ್ತಿಗೆ ಮಂಜೂರಾಗಿರುವವರ ಪಟ್ಟಿ

ಕ್ರ. ಸಂ.	ಹೆಸರು ಮತ್ತು ವಿಳಾಸ	ಗಣಿ ಗುತ್ತಿಗೆ ಸಂಖ್ಯೆ ಮತ್ತು ಗಣಿ ಗುತ್ತಿಗೆ ಪ್ರದೇಶ	ವಿಸ್ತೀರ್ಣ	ಗಣಿಗುತ್ತಿಗೆ ಅವಧಿ
1.	ಮೆ: ಕರ್ನಾಟಕ ಮೈನಿಂಗ್ ಕಂ. ಲಿ. ನಂ. 300/1ಬಿ, 16ನೇ ಕ್ರಾಸ್, ಸದಾಶಿವನಗರ, ಬೆಂಗಳೂರು–80	983 ಮಹದೇವನಕಟ್ಟೆ ಮತ್ತು ಇತರೆ ಗ್ರಾಮ. ಹೊಳಲ್ಕೆರೆ ತಾಲ್ಲೂಕು ಚಿತ್ರದುರ್ಗ ಜಿಲ್ಲೆ	16.19 ಹೆ.	17–7–70 ರಿಂದ 20 ವರ್ಷಗಳ ಅವಧಿಗೆ, ನವೀಕರಣ ಅರ್ಜಿ ಪ್ರಗತಿಯಲ್ಲಿದೆ.

1	2	3	4	5
2.	ಮೆ: ಮಿನರಲ್ ಎಂಟರ್ ಪ್ರೈಸಸ್ ಲಿ. ನಂ. 300/1ಬಿ, 16ನೇ ಕ್ರಾಸ್, ಸದಾಶಿವನಗರ, ಬೆಂಗಳೂರು–80	2346 ಬೇಡರ ಬೊಮ್ಮನಹಳ್ಳಿ ಹೊಳಲ್ಕೆರೆ ತಾಲ್ಲೂಕು ಚಿತ್ರದುರ್ಗ ಜಿಲ್ಲೆ	105 ಹೆ.	7–10–92 ರಿಂದ 20 ವರ್ಷಗಳ ಅವಧಿಗೆ ನವೀಕರಣ ಅರ್ಜಿ ಪ್ರಗತಿಯಲ್ಲಿದೆ.
3.	ಮೆ: ಮಿನರಲ್ ಎಂಟರ್ ಪ್ರೈಸಸ್ ಲಿ. ನಂ. 300/1ಬಿ, 16ನೇ ಕ್ರಾಸ್, ಸದಾಶಿವನಗರ, ಬೆಂಗಳೂರು–80	966 ಬೇಡರ ಬೊಮ್ಮನಹಳ್ಳಿ ಹೊಳಲ್ಕೆರೆ ತಾಲ್ಲೂಕು ಚಿತ್ರದುರ್ಗ ಜಿಲ್ಲೆ	6.07 ಹೆ.	1–4–70 ರಿಂದ 20 ವರ್ಷಗಳ ಅವಧಿಗೆ (19 RVN 90) ನವೀಕರಣ ಅರ್ಜಿ ಪ್ರಗತಿಯಲ್ಲಿದೆ.
4.	ಮೆ: ಮಿನರಲ್ ಎಂಟರ್ ಪ್ರೈಸಸ್ ಲಿ. ನಂ. 300/1ಬಿ, 16ನೇ ಕ್ರಾಸ್, ಸದಾಶಿವನಗರ, ಬೆಂಗಳೂರು–80	2388 ಬೇಡರ ಬೊಮ್ಮನಹಳ್ಳಿ ಹೊಳಲ್ಕೆರೆ ತಾಲ್ಲೂಕು ಚಿತ್ರದುರ್ಗ ಜಿಲ್ಲೆ	57 ಹೆ.	18–4–2003 ರಿಂದ 20 ವರ್ಷಗಳ ಅವಧಿಗೆ ನವೀಕರಣ ಅರ್ಜಿ ಪ್ರಗತಿಯಲ್ಲಿದೆ.
5.	ಇ. ರಾಮಮೂರ್ತಿ, ನಂ. 59, 24ನೇ ಮೈನ್, ಶ್ರೀನಗರ, ಬೆಂಗಳೂರು–50	2294 ತಣಿಗೆಹಳ್ಳಿ, ಬೌಡನಹಳ್ಳಿ ಮತ್ತು ಮೇಗಲಹಳ್ಳಿ ಹೊಳಲ್ಕೆರೆ ತಾಲ್ಲೂಕು ಚಿತ್ರದುರ್ಗ ಜಿಲ್ಲೆ	42.60 ಹೆ.	4–7–97 ರಿಂದ 20 ವರ್ಷಗಳ ಅವಧಿಗೆ
6.	ಎ. ನಾರಾಯಣ ಮೈನ್ಸ್ ಪ್ರೈ. ಲಿ. ಬಸಪ್ಪ ಕಾಂಪ್ಲೆಕ್ಸ್, 1ನೇ ಮಹಡಿ, ಹೊಳಲ್ಕೆರೆ ರಸ್ತೆ ಚಿತ್ರದುರ್ಗ ಜಿಲ್ಲೆ–577501	2236 ಮೇಗಲಹಳ್ಳಿ ಮತ್ತು ಇತರೆ ಗ್ರಾಮಗಳು ಹೊಳಲ್ಕೆರೆ ತಾಲ್ಲೂಕು ಚಿತ್ರದುರ್ಗ ಜಿಲ್ಲೆ	163.50 ಹೆ	28–10–92 ರಿಂದ 20 ವರ್ಷಗಳ ಅವಧಿಗೆ

1	2	3	4	5
7.	ಮೆ: ತಂಗವೇಲು, ಮತ್ತು ಇತರರು 3ಎ, ಹೆಚ್.ವಿ.ಎಸ್. ಅಪಾರ್ಟ್‌ಮೆಂಟ್, ನಂ.1, ಎಡ್ವರ್ಡ್ ರಸ್ತೆ, ಬೆಂಗಳೂರು–52	1784 ದೊಡ್ಡಬ್ಯಾಲದಕೆರೆ, ಹೊಸದುರ್ಗ ತಾ. ಚಿತ್ರದುರ್ಗ ಜಿಲ್ಲೆ.	131.52 ಹೆ.	18–5–79 ರಿಂದ 20 ವರ್ಷಗಳಿಗೆ ಪ್ರಸ್ತುತ ನವೀಕರಣ ಹಂತದಲ್ಲಿದೆ.
8.	ಮೆ: ಮಿನರಲ್ ಎಂಟರ್ ಪ್ರೈಸಸ್ ಲಿ. ನಂ. 300/1ಬಿ, 16ನೇ ಕ್ರಾಸ್, ಸದಾಶಿವನಗರ, ಬೆಂಗಳೂರು–80	1485 ಕೆ.ಕೆ. ಕಾವಲ್ ಹೊಸದುರ್ಗ ತಾ ಚಿತ್ರದುರ್ಗ ಜಿಲ್ಲೆ	12.87 ಹೆ.	15–6–1976 ರಿಂದ 20 ವರ್ಷಗಳ ಅವಧಿಗೆ ಪ್ರಸ್ತುತ ನವೀಕರಣ ಹಂತದಲ್ಲಿದೆ.
9.	ಎಂ. ದಶರಥರಾಮೀ ರೆಡ್ಡಿ ಶ್ರೀ ಕೃಷ್ಣ ಗಾರ್ಡೇನಿಯಾ ಅಪಾರ್ಟ್‌ಮೆಂಟ್, ಫ್ಲಾಟ್ ನಂ. 3, ನಂ. 559, ಆರ್.ಎಂ.ವಿ. 2ನೇ ಹಂತ, 5ನೇ ಮುಖ್ಯ ರಸ್ತೆ, ನ್ಯೂ ಬಿ.ಇ.ಎಲ್. ರಸ್ತೆ ಬೆಂಗಳೂರು–94	1534 ಚಿಕ್ಕಬ್ಬದಹಳ್ಳಿ ಲಕ್ಕಿಹಳ್ಳಿ, ಮತ್ತು ಕೆಂಕೆರೆ	19.95 ಹೆ.	10–3–76 ರಿಂದ 20 ವರ್ಷ ಅವಧಿಗೆ ಪ್ರಸ್ತುತ ನವೀಕರಣ ಹಂತದಲ್ಲಿದೆ.
10.	ಮಹಬಲೇಶ್ವರ ಮೈನಿಂಗ್ ಇಂಡಸ್ಟ್ರೀಸ್ ಬಿ.45, ಕಂಟೋನ್‌ಮೆಂಟ್ ಒಲ್ಡ್ ಮಾರ್ಕೆಟ್ ರಸ್ತೆ, ಬಳ್ಳಾರಿ–583104	1942 ಮಾರೇನಹಳ್ಳಿ ಜಗಳೂರು ತಾಲ್ಲೂಕು ದಾವಣಗೆರೆ ಜಿಲ್ಲೆ.	95 ಎಕರೆ	14–5–84 ರಿಂದ 20 ವರ್ಷಗಳ ಅವಧಿಗೆ ಪ್ರಸ್ತುತ ನವೀಕರಣದಲ್ಲಿದೆ.
11.	ಅಲ್ಲಂ ವೀರಭದ್ರಪ್ಪ ಗಡಿಗೆ ಪ್ಯಾಲೇಸ್, ಕಂಟೋನ್‌ಮೆಂಟ್ ಬಳ್ಳಾರಿ–583104	2436 ಕೆಂಚೇನಹಳ್ಳಿ, ಹೊಸದುರ್ಗ ತಾ. ಚಿತ್ರದುರ್ಗ ಜಿಲ್ಲೆ.	28.07 ಹೆ.	19–12–2000 ದಿಂದ 20 ವರ್ಷಗಳ ಅವಧಿಗೆ